ಶ್ರೀ ಎನ್. ಎ. ಚನ್ನೇಗೌಡ:—ಈ ವಿದ್ಯಾರ್ಥಿಗಳು ಶಿಕ್ಷಣ ಪಡೆದಮೇಲೆ ಎಷ್ಟು ಜನರಿಗೆ ಉದ್ಯೋಗವಕಾಶವನ್ನು ಒದಗಿಸಿಕೊಟ್ಟಿದ್ದೀರಿ? ಮತ್ತು ಅವರಿಗೆ ಉದ್ಯೋಗ ಕೊಡುವಾಗ ಪ್ರಿಫರೆನ್ಸ್ ಕೊಟ್ಟು ನೇಮಕ ಮಾಡಿದ್ದೀರಾ?

ಶ್ರೀ ವಿ. ಎಲ್. ಪಾಟೀಲ್: -ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮೂಲಕ ಅವರಿಗೆ ಎಷ್ಟೆಷ್ಟು ಸೌಲಭ್ಯ ಕೊಡಲು ಸಾಧ್ಯವಿದೆ, ಅದನ್ನು ಕೊಟ್ಟು ಬೇರೆಬೇರೆ ಇಲಾಖೆಗಳಲ್ಲಿ ಅವರಿಗೆ ಉದ್ಯೋಗ ಕೊಟ್ಟಿದ್ದಾರೆ.

ಶ್ರೀ ಎ. ಮುನಿಯಪ್ಪ:—ಅವರ ಕಷ್ಟಸುಖಗಳನ್ನು ನೋಡಲು ಗುಲ್ಬರ್ಗ ಮುಂತಾದ ಕಡೆಗಳಲ್ಲಿರುವ ಸಂಸ್ಥೆಗಳಿಗೆ ಈ ಖಾತೆಯ ಮಂತ್ರಿಯವರು ಮತ್ತು ಉಪ-ಮಂತ್ರಿಯವರು ಎಷ್ಟುಸಾರಿ ಭೇಟಿ ನೀಡಿದ್ದಾರೆ?

ಶ್ರೀ ವಿ.ಎಲ್. ಪಾಟೀಲ್: — ಏನಾದರೂ ಅಲ್ಲಿಗೆ ಹೋಗುವ ಅವಶ್ಯಕತೆ ಇದ್ದರೆ, ಅಧಿಕಾರಿಗಳು ಇದ್ದಾರೆ, ಅವರು ಹೋಗಿ ನೋಡುತ್ತಾರೆ.

ಶ್ರೀ ಬಿ. ದೊಡ್ಡಬೋರೇಗೌಡ:—ಮೈಸೂರು ರಾಜ್ಯದಲ್ಲಿ ಕುರುಡರ, ಕಿವುಡರ ಮತ್ತು ಮೂಕರ ಮಕ್ಕಳ ಸಂಖ್ಯೆ ಎಷ್ಟು ಇದೆ? ರಾಜ್ಯದ ಯಾವ್ಯಾವ ಜಿಲ್ಲೆಗಳಲ್ಲಿ ಇವರಿಗೆ ಬೇಕಾದಂತಹ ಪಾಠಶಾಲೆಗಳನ್ನು ತೆರೆದಿದ್ದೀರಿ? ಎಷ್ಟು ಮಕ್ಕಳು ಇದರ ಸೌಲಭ್ಯ ಪಡೆಯುತ್ತಿದ್ದಾರೆ?

ಶ್ರೀ ವಿ. ಎಲ್. ಪಾಟೀಲ್ :—ಸರ್ಕಾರದ ವತಿಯಿಂದ ಸುಮಾರು ಮೂರು ಸಂಸ್ಥೆಗಳು ಇವೆ. ಪ್ರೈವೇಟ್ ಆಗಿ ನಾಲ್ಕು ಸಂಸ್ಥೆಗಳು ಇವೆ. ಅವರಿಗೆ ಏನೇನು ಸೌಲಭ್ಯಗಳನ್ನು ಕೊಡುತ್ತೇವೆನ್ನುವ ಬಗ್ಗೆ ಉತ್ತರದಲ್ಲಿ ಆವಾಗಲೇ ಕೊಟ್ಟಿದ್ದೇನೆ.

ಶ್ರೀ ನಾಗರತ್ನಮ್ಮ ಹಿರೇಮಠ :—ಹುಬ್ಬಳ್ಳಿಯಲ್ಲಿ ಮಹಿಳಾ ವಿದ್ಯಾಪೀಠವನ್ನು ತೆರೆದು ಎಷ್ಟು ವರ್ಷವಾಯಿತು?

ಶ್ರೀ ವಿ. ಎಲ್. ಪಾಟೀಲ್ :—ಯಾವಾಗ ತೆರೆದದ್ದು ಎಂಬುದರ ಬಗ್ಗೆ ಮಾಹಿತಿ ಇಲ್ಲ. ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು.

MR. DEPUTY SPEAKER .—Question time is over. Now short notice question No 3 by Sri K P. Nadagowda

SHORT NOTICE QUESTION AND ANSWER
NOMINATION TO THE SENATES OF THE KARNATAK AND THE BANGALORE UNIVERSITY

3. SRI K. P. NADGOWDA (Mudhol) :—

Will the Minister for Education be pleased to state :—

(*a*) whether it is a fact that Sri Patil Puttappa, M. P., a defeated candidate and Sri Kotrabasappa have been nominated to the Senates of the Karnatak and Bangalore Universities respectively by the Chancellor on the recommendation of the Government;

(*b*) if so, the reasons for recommending a defeated candidate?

SRI N. M. KOTRABASIAH SOGI (Deputy Minister for Education) :—

(*a*) Sri Patil Puttappa, M. P., who had earlier contested and lost in the election for the membership of the Senate of the Karnatak University, has been nominated to the Senate by the Chancellor on the recommendation of the Vice-Chancellor. Sri Kotrabasappa has not been nominated to the Senate of the Bangalore University, nor did he contest at any time the election to the Senate of the Bangalore University.

(*b*) Does not arise in view of answer to question (*a*).

ಶ್ರೀ ಕೆ.ಪಿ. ನಾಡಗೌಡ —ವೈಸ್ ಚಾನ್ಸ್ ಲರ್ ಶಿಫಾರಸಿನ ಮೇಲೆ ಚ್ಯಾನ್ಸ್ಲರ್ ನಾಮಕರಣ ಮಾಡಿದ್ದಾರೆಂದು ಹೇಳಿದ್ದೀರಿ. ಇದರಲ್ಲಿ ಯುನಿವರ್ಸಿಟಿಗೂ ಮತ್ತು ಸರ್ಕಾರಕ್ಕೂ ಯಾವ ಸಂಬಂಧವಿಲ್ಲವೇ ? ಮತ್ತು ಚ್ಯಾನ್ಸ್ಲರ್ ಗೌರ್ನರಿಗೂ ಕ್ಯಾಬಿನೆಟಿಗೂ ಯಾವ ಜವಾಬ್ದಾರಿಯೂ ಇಲ್ಲವೇ ?

†ಶ್ರೀ ಎಸ್. ಎಂ. ಕೊಟ್ರಬಸಯ್ಯಸೋಗಿ :—ಸರ್ಕಾರದವರು ವಿಚಾರ ಮಾಡಿ ಚುನಾವಣೆಯಲ್ಲಿ ಸೋತವರನ್ನು ನಾಮಕರಣ ಮಾಡಲು ಯಾವ ಬಂಧನವೂ ಇಲ್ಲವೆಂದು ಮಾಡಿದ್ದಾರೆ ಮತ್ತು ಇದು ಕಾಯಿದೆಗೆ ವಿರುದ್ಧವೂ ಅಲ್ಲ.

ಶ್ರೀ ಕೆ. ಪಿ. ನಾಡಗೌಡ :—ನೈತಿಕ ದೃಷ್ಟಿಯಿಂದ ತಪ್ಪಾಗುವುದಿಲ್ಲವೇ ?

ಶ್ರೀ ಎಸ್. ಎಂ. ಕೊಟ್ರಬಸಯ್ಯಸೋಗಿ :—ಒಬ್ಬೊಬ್ಬ ಉನ್ನತ ವ್ಯಕ್ತಿಗಳೂ ಚುನಾವಣೆಯಲ್ಲಿ ಸೋಲುವುದು ಉಂಟು. ಶಿಕ್ಷಣ ಕ್ಷೇತ್ರದಲ್ಲಿ ಇದ್ದವರು ಸೋತರೂ ಅವರಿಗೆ ಅವಕಾಶ ಮಾಡಿಕೊಡಬೇಕೆಂದು ಇದೆ. ಹಾಗೆ ಮಾಡಲಾಗಿದೆ.

SRI K. H. PATIL : Is the Government aware that the Governor during his visit to Hubli has denied the knowledge of the defeat of Sri Patil Puttappa and that he also stated that Sri Puttappa's nomination was due to the factt hat the Vice-Chancellor and the Minister for Education approached him and appraised him of the situation and the importance of nominating Sri Patil Puttappa to the Senate ? Further, is the Government aware that in the Senate Election the people have rejected him and that people are taking that his nomination is a reward to him ?

SRI N. M. KOTRABASAIAH SOGI :—For the first question, I say I have no information at present. For the second question, I have already answered. It is the unfettered power of the Chancellor to nominate anybody, even persons who are defeated in the elections.

ಶ್ರೀ ಎಸ್. ಬಂಗಾರಪ್ಪ :—ಶ್ರೀ ಪಾಟೀಲ್ ಪುಟ್ಟಪ್ಪ ಎನ್ನುವವರು ಪ್ರಪಂಚ ಎಂಬ ಪತ್ರಿಕೆಯನ್ನು ನಡೆಸುತ್ತಿದ್ದರು. ಅವರು ಶ್ರೀಮಾನ್ ನಿಜಲಿಂಗಪ್ಪನವರನ್ನು ಸಿಕ್ಕಾಪಟ್ಟೆ ಹೊಗಳುತ್ತಿದ್ದರು. ಆದನ್ನು ಅವರು ತಮ್ಮ ಪತ್ರಿಕೆಯಲ್ಲಿ ಹೆಚ್ಚು ಹೆಚ್ಚಾಗಿ ಪ್ರಚಾರ ಮಾಡುತ್ತಿದ್ದರು. ಅದಕ್ಕಾಗಿ ಅವರನ್ನು ಕೆಲವರು ಪಿಟೀಲ್ ಪುಟ್ಟಪ್ಪನವರು ಎಂದು ಹೆಸರಿಟ್ಟು ಕರೆಯುತ್ತಿದ್ದರು. ಇವರು ತಮ್ಮ ಪಕ್ಷದವರು ತಮ್ಮ ಗುಂಜಿನವರು ಚುನಾವಣೆಯಲ್ಲಿ ಸೋತರು ಎಂದು ಅವರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಅವರನ್ನು ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ಸರ್ಕಾರ ನಾಮಕರಣ ಮಾಡಿದೆಯಲ್ಲವೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ :—ಅದು ಕಾರಣವಲ್ಲ. ಶ್ರೀಮಾನ್ ಪಾಟೀಲ್ ಪುಟ್ಟಪ್ಪನವರು ಶಿಕ್ಷಣ ಕ್ಷೇತ್ರದಲ್ಲಿ ಶ್ಲಾಘನೀಯವಾದ ಸೇವೆಯನ್ನು ಸಲ್ಲಿಸಿದ್ದಾರೆ. ಆದ ಕಾರಣ ಅವರನ್ನು ಚಾನ್ಸಲರ ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ನಾಮಕರಣ ಮಾಡಿದ್ದಾರೆ.

SRI S. R. BOMMAI :—Is it not a fact that twice he was elected to the Senate and Syndicate of the Karnataka University ? Is it not a fact that he has been wellknown journalist in the State for the last fifteen years ?

SRI N. M KOTRABASAIAH SOGI : - What Mr Bommai says is perfectly true Sir.

ಶ್ರೀ ಎಚ್. ಸಿದ್ದವೀರಪ್ಪ ;—ಶ್ರೀಮಾನ್ ಪಾಟೀಲ್ ಪುಟ್ಟಪ್ಪನವರನ್ನು ಸೆನೆಟ್ಟಿಗೆ ನಾಮಕರಣ ಮಾಡುವ ಸಂಬಂಧದಲ್ಲಿ ಆ ಫೈಲು ಸರ್ಕಾರದ ಮುಂದೆ ಯಾವಾಗಲಾದರೂ ಬಂದಿದೆಯೇ ? ಆ ವಿಚಾರದಲ್ಲಿ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆಯೇ ? ಮತ್ತು ಶ್ರೀ ಕೊಟ್ರಬಸಪ್ಪ ಅವರನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಚುನಾವಣೆಯಲ್ಲಿ ಸ್ಪರ್ಧಿಸಿ ಪರಾಜಯ ಹೊಂದಿದ ಮೇಲೆ ಅವರನ್ನು ಕರ್ನಾಟಕ ವಿಶ್ವವಿದ್ಯಾನಿಲಯದ ಸೆನೆಟ್ಟಿಗೆ ನಾಮಕರಣ ಮಾಡಿರುವುದು ನಿಜವೆ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ . ಅವರನ್ನು ನಾಮಿನೇಟ್ ಮಾಡುವಾಗ ಛಾನ್ಸಲರ್ ಅವರು ಸರ್ಕಾರದವರನ್ನು ಕನ್‌ಸಲ್ಟ್ ಮಾಡಿದ್ದಾರೆ. ಮತ್ತು ಶ್ರೀ ಕೊಟ್ರಬಸಪ್ಪ ಅವರು ಮೈಸೂರು ಯೂನಿವರ್ಸಿಟಿ ಸೆನೆಟ್ಟಿಗೆ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತದ್ದು ನಿಜ. ಮತ್ತು ಅವರನ್ನು ಈಗ ನಾಮಕರಣ ಮಾಡಿರುವುದು ನಿಜ.

ಶ್ರೀ ಎಚ್. ಸಿದ್ದವೀರಪ್ಪ .—ಶ್ರೀಮಾನ್ ಪಾಟೀಲ್ ಪುಟ್ಟಪ್ಪನವರನ್ನು ನಾಮಿನೇಟ್ ಮಾಡುವ ವಿಚಾರ ಸರ್ಕಾರದ ಮುಂದೆ ಬಂದಾಗ ಅವರನ್ನು ನಾಮಿನೇಟ್ ಮಾಡಬಹುದು ಎಂದು ಸರ್ಕಾರದವರು ಹೇಳಿದ್ದಾರೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ .—ಸರ್ಕಾರ ಅಭಿಪ್ರಾಯವನ್ನು ಕೊಟ್ಟಿದೆ.

(ಈ ಸಂದರ್ಭದಲ್ಲಿ ಅನೇಕ ಮಾನ್ಯ ಸದಸ್ಯರು ಎದ್ದುನಿಂತು ಮಾತನಾಡುತ್ತಿದ್ದರು.

Mr. DEPUTY SPEAKER .—Nothing may be recorded.

Matter not recorded as ordered by the Chair .—

* * *

ಶ್ರೀ ಎಸ್. ಚೆನ್ನಯ್ಯ :— ಸ್ವಾಮಿ, ಈ ಪ್ರಶ್ನೆ ಇತ್ಯರ್ಥವಾಗುವವರೆಗೆ ತಾವು ಯಾರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಬಾರದು.

ಉಪಾಧ್ಯಕ್ಷರು : ನನ್ನ ಅನುಮತಿ ಇಲ್ಲದೆ ಅವರು ಮಾತನಾಡಿರುವುದರಿಂದ ಅದು ಅಕ್ರಮ ಎಂದು ನಾನು ಆಗಲೇ ಹೇಳಿದೆ.

ಶ್ರೀ ಕೆ. ಎಚ್. ಶ್ರೀನಿವಾಸ :— ನನಗೆ ತಿಳಿದಿರುವಂತೆ ವಿಶ್ವವಿದ್ಯಾನಿಲಯ ಒಂದು ಅಟಾನಮಸ ಬಾಡಿ. ಕುಲಪತಿಯವರು ಸ್ವತಂತ್ರ್ಯವಾಗಿ ಕಾರ್ಯ ನಿರ್ವಹಿಸುತ್ತಾರೆ. ವಿಶ್ವ ವಿದ್ಯಾನಿಲಯದ ಸೆನೆಟಿಗೆ ಯಾರನ್ನಾದರೂ ನಾಮಕರಣ ಮಾಡಬೇಕಾದರೆ ಕುಲಪತಿಯವರು ಸರ್ಕಾರವನ್ನು ಕೇಳಬೇಕಾಗಿಲ್ಲ ಸರ್ಕಾರದ ಶಿಫಾರಸ್ಸಿನ ಮೇರೆಗೆ ನಾಮಕರಣ ಮಾಡಬೇಕಾಗಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಈಗ ನಾಮಕರಣ ಮಾಡಿರುವಂತಹವರು ಸರ್ಕಾರದ ಶಿಫಾರಸ್ಸಿನ ಮೇರೆಗೆಆಗಿದ್ದಾರೆಯೇ ಅಥವಾ ಕುಲಪತಿಯವರೆ ನೇರವಾಗಿ ನಾಮಕರಣ ಮಾಡಿದ್ದಾರೆಯೇ ಎಂದು ನಾನು ಕೇಳುತ್ತೇನೆ. ಸರ್ಕಾರದ ಶಿಫಾರಸ್ಸಿನ ಮೇಲೆ ಮಾಡಿದ್ದರೆ ಆದಕ್ಕೆ ಸಂಬಂಧಪಟ್ಟ ಫೈಲ್‌ಅನ್ನು ಸಭೆಯ ಮುಂದೆ ಇಡುತ್ತೀರಾ?

ಶ್ರೀ ಎನ್.ಎಂ. ಕೊಟ್ರಬಸಯ್ಯಸೋಗಿ: ಕಾಯಿದೆ ಪ್ರಕಾರ ಕುಲಪತಿಯವರೇ ಸ್ವತಃ ನಾಮಕರಣ ಮಾಡುವ ಅಧಿಕಾರ ಹೊಂದಿದ್ದಾರೆ. ಸರ್ಕಾರದ ಅಭಿಪ್ರಾಯ ತೆಗೆದು ಕೊಳ್ಳಬೇಕೆಂಬ ನಿರ್ದಿಷ್ಟವಾದ ನಿರ್ಬಂಧವೇನೂ ಇಲ್ಲ. ಆದರೂ ಕೂಡ ಕುಲಪತಿಯವರು ಸರ್ಕಾರದ ಅಧಿಪತಿಯಾದ್ದರಿಂದ ನಾಮಕರಣ ಮಾಡುವುದಕ್ಕೆ ಮುಂಚೆ ಸಂಬಂಧಪಟ್ಟ ಮಂತ್ರಿಗಳನ್ನು ಮತ್ತು ಮುಖ್ಯಮಂತ್ರಿಗಳನ್ನು ಇನ್‌ಫಾರಮಲ್ ಆಗಿ ವಿಚಾರ ಮಾಡಿದ್ದಾರೆ. ಆದ್ದರಿಂದ ನಿರ್ದಿಷ್ಟವಾಗಿ ಕುಲಪತಿಯವರೇ ನಾಮಕರಣ ಮಾಡಿದ್ದಾರೆಂದೂ ಹೇಳುವುದಕ್ಕಾಗುವುದಿಲ್ಲ.

SRI K. H. SRINIVASA :— If the Hon. Minister is not having information, let this question be withheld. We understand that the Governor has acted independently. If the Minister has not got perfect information, let the question be held over

SRI B. B. SAYANAK :—Why should the question be held over? The Minister is giving correct information.

SRI K. H. PATIL :— I want to know whether all the records will be placed on the Table of the House.

SRI B. P GANGADHAR :— It is ridiculous to know how things are going on in that department. It is a serious matter.

MR. DEPUTY SPEAKER :— I hold over the question.

SRI S. SIVAPPA:— I want to put one question because it relates to the functions and privileges of Chancellor. The Minister has not given answer. I know how the universities are functioning. There is nothing to hold over the question. Let the Minister give the answer.

SRI B. P. GANGADHAR :— Should not the Minister be here when this question comes up? He should have been here.

SRI S. SIVAPPA : I want to know why this question should be held over.

MR. DEPUTY SPEAKER:— I have said, that Short Notice question is over. and this question is held over,

2-30 P.M.

SRI K. H. PATIL :—I am on a point of order. According to the custom followed by the Chair till now, a Question can be held over only when there is a request from the Treasury Bench. But in the present case, the Government are armed with information. Here not a single one from the Treasury Bench has requested the Chair to hold over the Question. The Hon. Education Minister is fully armed with information and in fact, he can reply. The members have the liberty to

(Sri K. S. PATIL)

extract all the material possible. The fact that it is held over proves that this Ministry is a corrupt Ministry and that this Ministry is practising nepotism. Under such circumstances, no opportunity should be given to the Government to facilitate the Ministry to evade giving evidence or do something in their favour. The Short Notice Question shall not be held over. If it is held over, it will not be proper ; it will be illegal.

MR. DEPUTY SPEAKER :—There is no point of order. The Chair has powers to hold over a question. One of the Hon. Members also requested the Chair to hold over this Question and I also felt that way. Let the Hon. Minister for Education answer the question. Let us drop further discussion on this.

ಶ್ರೀ ಕೆ. ಪ್ರಭಾಕರ್ (ವರ್ತೂರು):-ನನ್ನದೊಂದು ಪಾಯಿಂಟ್ ಆಫ್ ಆರ್ಡರು ಇದೆ, ಪ್ರಶ್ನೆಯನ್ನು ಮುಂದಕ್ಕೆ ಹಾಕಬೇಕಾದ ಸಂದರ್ಭಗಳು ಎರಡು ಇರುತ್ತವೆ. ಅದೂ ಕ್ರಿಸ್ಟಲ್ ಕ್ಲಿಯರ್ ಆಗಿದೆ. ಯಾವ ಸದಸ್ಯರೇ ಆಗಲಿ ಪ್ರಶ್ನೆ ಕೇಳಿದಾಗ ಅದಕ್ಕೆ ಸರಕಾರದ ಕಡೆಯಿಂದ ಸಾಕಷ್ಟು ಉತ್ತರ ಬಾರದೇ ಇರುವಾಗ ಪ್ರಶ್ನೆಯನ್ನು ಮುಂದಕ್ಕೆ ಹಾಕಬಹುದು. ಇನ್ನೊಂದು ಸಂದರ್ಭದಲ್ಲಿ ಪ್ರಶ್ನೆಯನ್ನು ಕೇಳಿದಾಗ ಸರಕಾರದವರು ಯೋಚನೆ ಮಾಡುತ್ತೇವೆ ಮತ್ತು ಸಾಕಷ್ಟು ವಿವರಗಳು ಇಲ್ಲ ಎಂದು ಹೇಳಿದಾಗ ಮಾತ್ರ ಪ್ರಶ್ನೆಗಳನ್ನು ಮುಂದೂಡುವ ಸಂದರ್ಭ ಬರುತ್ತದೆ. ಇಲ್ಲಿ ಅಂತಹ ಸಂದರ್ಭಗಳು ಯಾವುವೂ ಬಂದಿಲ್ಲ. ಇವೆರಡು ಸಂದರ್ಭಗಳೂ ಇಲ್ಲಿ ಇಲ್ಲ ಅಲ್ಲದೆ ಪ್ರಶ್ನೆಯನ್ನು ಕೇಳಿರುವ ಸದಸ್ಯರು ದೇವರ ಹಾಗೆ ಕಲ್ಲಿನಂತೆ ಇಲ್ಲೇ ಕುಳಿತಿದ್ದಾರೆ ಮತ್ತು ಅವರು ಈಗಾಗಲೇ ಎಲ್ಲ ಪ್ರಶ್ನೆಗಳನ್ನೂ ಕೇಳಿಬಿಟ್ಟಿದ್ದಾರೆ. ಇದರಲ್ಲಿ ಕ್ರಮ ಲೋಪವಾಗಿದೆ ಎಂದು ತಾವು ಹೇಳುವ ಹಾಗಿದ್ದರೆ, ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಲು ಇದ್ದಂತಹ ಕಾರಣಗಳೇನು ಎನ್ನುವುದನ್ನು ೧,೨,೩, ಮತ್ತು ೪ ಎಂದು ಕಾರಣಗಳನ್ನು ತಾವು ಇಲ್ಲಿ ನಮಗೆ ಕೊಡಬೇಕು. ಇಂತಹ ಒಂದು ಸತ್ ಸಂಪ್ರದಾಯವನ್ನು ತಾವು ಇಲ್ಲಿ ಬೆಳಸಬೇಕು. ಇಲ್ಲದಿದ್ದರೆ ಇದು ಸಭೆಯ ಹಕ್ಕಿಗೆ ಲೋಪ ಬಂದಂತೆ ಕಾಣುತ್ತದೆ ಮತ್ತು ಧಕ್ಕೆ ಒರುತ್ತದೆ. ಇವೆರಡು ಪ್ರಶ್ನೆಗಳನ್ನು ತಾವು ಮೊದಲು ಇಲ್ಲಿ ಇತ್ಯರ್ಥ ಮಾಡಿ ಆಮೇಲೆ ಬೇರೆ ವಿಚಾರಗಳನ್ನು ಪರಿಶೀಲಿಸಬಹುದು.

ಉಪಾಧ್ಯಕ್ಷರು :—ಇದರಲ್ಲಿ ಅಕ್ರಮದ ಪ್ರಶ್ನೆ ಏನೂ ಇಲ್ಲ. ಸ್ಪೀಕರ್‌ರವರಿಗೆ ಪ್ರಶ್ನೆಯನ್ನು ಮುಂದಕ್ಕೆ ಹಾಕಲು ಅಧಿಕಾರವಿದೆ. ಆದರಂತೆ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ. ಸ್ಪೀಕರ್‌ರವರು ಒಂದು ಸಾರಿ ರೂಲಿಂಗು ಕೊಟ್ಟನಂತರ ಅದರ ಬಗ್ಗೆ ಪುನಃ ಪ್ರಶ್ನೆ ಮಾಡುವುದು ಆಷ್ಟು ಸರಿಯಲ್ಲ.

SRI S. SIVAPPA:—we are not questioning your ruling. Some of the hon, Members wanted to elicit the information whether the Government has recommended anything on the file which was sent by the Chancellor to the Government for its opinion about the nomination of Sri Patil Puttappa to the Senate of the Karnatak University. If the Hon Minister agrees to place that file and note before this House, only then the question can be held over. If that is the point for which you want to hold over the question, let that assurance come from Minister. Only when he agrees that specific request, it can be held over.

MR. DEPUTY SPEAKER:—It is already held over. It will come up before the House once again and the Hon. Education Minister will answer it.

SRI H. B JWALANIAH:—Let there be an order even in madness.

SRI B. P. GANGADHAR:—I am on a point of order. So far as the power of the Speaker in giving ruling is concerned, I have absolutely no quarrel. Even if an illegal order is passed by you, we shall bow before it. I cannot question the bonafides or genuineness or illegality of your order. The Hon. Cabinet Minister definitely knows that an intricate and serious matter is coming up before the House The Opposition and some members of the Ruling Party are keen on putting questions and he knows we will be hammering him. Then why should he not have come to the House? Is there no duty cast on him? There must be some good sense in him. He must be prevailed upon to come here and answer all the queries that will be put from either side. Why should he shirk his responsibility? Why should he ask his Deputy to answer the question? Is it not necessary that the Education Minister himself should answer it? There is so much to be said against the Department of Education. When such an important question comes up before this House, is it or is it not the duty of Shri Shankara Gowda, a Cabinet Rank Minister, to be here to answer every one of us?

MR. DEPUTY SPEAKER:—He has not shirked his responsibility. He is the Leader of the Upper House. Because he is in the other House, he has not been able to be present here now.

SRI H. SIDDAVEERAPPA:—Now that you have said that the question will be deferred, may I make a request to you to order that before that question is taken up the entire connected papers which are probably with the Deputy Minister are placed on the table of the House ?

MR. DEPUTY SPEAKER:—I will consider.

SRI K. H. PATIL:—We have got an apprehension that at the hands of this Government anything and everything is possible and so the file must be placed on the table of the House now.

MR. DEPUTY SPEAKER:—I will convey the hon member's feelings to the concerned Minister.

SRI K. H. PATIL:—We do not want you to do that. We have got every power to get the documents produced here. Let them be produced before this House.

ಶ್ರೀ ಎಸ್ ವಿ. ಅಗ್ನಿಹೋತ್ರಿ:—ಮಾನ್ಯ ಅಧ್ಯಕರೇ, ಈಗ ಸಭೆಯಲ್ಲಿರತಕ್ಕ ಅನೇಕ ಹಿರಿಯ ಸದಸ್ಯರು ಕೆಲವು ಪೇಪರುಗಳ ವಿಚಾರವನ್ನು ಎತ್ತಿದ್ದಾರೆ. ಆದರೆ ಅದಕ್ಕೆ ಸಂಬಂಧಪಟ್ಟ ಮಾನ್ಯ ಸಚಿವರು ಹಾಲಿ ಸಭೆಯಲ್ಲಿ ಇರುವುದಿಲ್ಲ. ಆದ್ದರಿಂದ ಈ ವಿಷಯವನ್ನು ಆ ಸಂಬಂಧಪಟ್ಟ ಮಂತ್ರಿಗಳು ಬಂದಾಗ ಕೇಳಬಹುದು ಎಂದು ಹೇಳುತ್ತೇನೆ.

SRI K. H. PATIL:—The document may be placed at the disposal of the Chair. We do not want to go through them for the present.

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಈ ಕೂಡಲೇ ಆ ಫೈಲನ್ನು ಅವರು ತಮ್ಮ ಕಡೆಗೆ ಕೊಡದೆ ಇದ್ದರೆ ಅದರಲ್ಲಿರತಕ್ಕ ವಿಷಯಗಳನ್ನು ಅವರು ಬದಲಾಯಿಸಬಹುದು, ಇಲ್ಲವೇ ಹಾಳು ಮಾಡಬಹುದು ಆದ್ದರಿಂದ ಆ ವಿಚಾರದಲ್ಲಿ ಅಧ್ಯಕ್ಷರ ಅಭಿಪ್ರಾಯವೇನು ?

MR. DEPUTY SPEAKER:—I will consider.

ಶ್ರೀ ಎನ್. ಹುಚ್ಚಮಾಸ್ತಿಗೌಡ:—ತಾವು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸದಿದ್ದರೆ ತಾವೂ ಕೂಡ ಸರ್ಕಾರದ ಪರವಾಗಿ ವರ್ತಿಸುತ್ತಿದ್ದೀರೆಂಬ ಅನುಮಾನಕ್ಕೆ ದಾರಿಕೊಡುತ್ತೀರಿ.

MR. DEPUTY SPEAKER:—I am not at all interested.
ನನ್ನಲ್ಲಿ ಆರೀತಿ ಏನೂ ಇಲ್ಲ. ನನಗೆ ಎಲ್ಲರೂ ಒಂದೇ.

MR. B. P. GANGADHAR;—We have got a lot of grouse against the Minister. What the Department is doing is most unpardonable from top to the bottom.

SRI AZIZ SAIT:—When the question was put the Deputy Minister was replying. At that time at the instance of the hon. Member Sri Srinivas you said that the question will be held over. When that was questioned, you said that the action of the Speaker should not be questioned. But now when we demand that the connected file should be placed on the table of the House you are quoting rules. We have got our own doubts that by tomorrow the file may be tampered with and certain papers may be missing. So will you please assure this House that you will get the file to your custody ? What is wrong in asking the Deputy Minister to hand over the file to you ! You are a neutral man. we want to test your neutrality by requesting you to get the file to your custody so that we may get minimum justice at your hands.

MR. DEPUTY SPEAKER :—Why only minimum justice Hon-Member shall get the maximum justice.

SRI AZIZ SAIT :—Then please rise to the occasion and order the Deputy Minister to place the file on the table of the House. Only then you can safeguard the confidence of the House in the Chair.

SRI K. H. PATIL :— It is not only a question of nomination. Every day so many things take place and so much injustice is being done to so many people. We are not much bothered about all that, but here is a man who is directlyconnected with the case with nepotism. His case is still pending with the Central Government. It is he who has brought a bad name to the State. This has created a grave situation. Therefore, we want that the file should be placed at your disposal today because we have an apprehension that otherwise they may tamper with the file. Tomorrow if you are satisfied with the file, you can return the file. Otherwise you can take whatever action you like,

SRI M. RAMAPPA :— I submit that the Speaker has no power to order the Government to place a confidential file before him.

ಶ್ರೀ ಎಂ. ಕೆ. ಸೂರಪೂರ್ :—ನನಗೆ ಇಂಥ ವಿಚಾರಗಳೆಲ್ಲಾ ಚೆನ್ನಾಗಿ ಗೊತ್ತಿದೆ. ಮಾನ ವಿದ್ಯಾಮಂತ್ರಿಗಳು ಈ ಸಭೆಗೆ ಬಂದಾಗ ಅವರನ್ನು ಕೇಳಿದರೆ ಆ ಆರ್ಡರನ್ನು ನಾನೇ ಮಾಡಿದುದು ಎಂದು ಹೇಳಿಬಿಡುತ್ತಾರೆ. ಅವರ ಸ್ವಭಾವ ನನಗೆ ಚೆನ್ನಾಗಿ ಗೊತ್ತು. ಹಿಂದೆ ಮಾನ್ಯ ಪೊರಾರ್ಜಿ ದೇಸಾಯಿ ಅವರೂ ನಮ್ಮ ಯಜಮಾನರೂ ಜನರ ಒತ್ತಾಯಕ್ಕೆ ಮಣಿದು ಇಂಥ ಕೆಲಸಗಳನ್ನು ಎಷ್ಟೋ ಮಾಡಿದ್ದಾರೆ. ಡೆಮಾಕ್ರಸಿಯಲ್ಲಿ ಇಂಥ ಕೆಲಸಗಳು ಆಗಿಯೇ ಆಗುತ್ತವೆ: ಅವುಗಳನ್ನು ತಪ್ಪಿಸುವುದಕ್ಕಾಗುವುದಿಲ್ಲ. ಆದ್ದರಿಂದ ಆ ಫೈಲಿನಲ್ಲಿ ಇರುವುದೇನು ತಪ್ಪಲ್ಲ ತಾವು ಆ ಫೈಲನ್ನು ಅಧ್ಯಕ್ಷರ ಕಡೆಗೆ ಇಟ್ಟುಬಿಡಿ ಎಂದು ಹೇಳುತ್ತೇನೆ.

ಶ್ರೀ ಕೆ. ಪಿ ನಾಡಗೌಡ : (ಮುಧೋಳ್) ಅಧ್ಯಕ್ಷರೆ, ನಾವು ಇಲ್ಲಿ ಪ್ರಶ್ನೆಗಳನ್ನು ಕೇಳಿದರೆ ಸರ್ಕಾರ ದಿಂದ ನಮಗೆ ಸರಿಯಾದ ಉತ್ತರಗಳು ಬರುತ್ತಿಲ್ಲ. ಈ ಸಭೆಯಲ್ಲಿ ಸದಸ್ಯರು ಕೇಳತಕ್ಕ ಪ್ರಶ್ನೆಗಳಿಗೆ ಸರ್ಕಾರದವರು ಸರಿಯಾದ ಉತ್ತರಗಳನ್ನು ಕೊಡುತ್ತಿಲ್ಲ ಎಂಬ ಅಂಶವನ್ನು ಅಧ್ಯಕ್ಷರು ತಮ್ಮ ಗಮನಕ್ಕೆ ತೆಗೆದುಕೊಳ್ಳಬೇಕು. ಇದು ಬಹಳ ಮಹತ್ವದ ವಿಷಯ. ಇಲ್ಲಿ ನಡೆಯುತಕ್ಕ ಗಡಿಬಿಡಿ ವ್ಯವಹಾರದಲ್ಲಿ ಸದಸ್ಯರು ಕೇಳುವ ಪ್ರಶ್ನೆಯೇ ಒಂದಾದರೆ ಅದಕ್ಕೆ ಒದಗಿಸತಕ್ಕ ಉತ್ತರವೇ ಒಂದಾಗಿರುತ್ತದೆ. ಆದರೆ ಈಗ ಯಾವ ಸದಸ್ಯರನ್ನು ನಾಮಕರಣ ಮಾಡಲಾಗಿದೆ ಅವರು ಮೊದಲು ಚುನಾವಣೆಗೆ ನಿಂತು ಆದರಲ್ಲಿ ಫೇಲಾಗಿದ್ದವರು, ಅಂಥವರನ್ನು ಏಕೆ ನಾಮಕರಣ ಮಾಡಲಾಯಿತು ಎಂಬುದನ್ನು ಕೇಳುತ್ತಿದ್ದಾಗ ಬುದ್ಧಿವಂತಿಕೆಯಿಂದ ಶ್ರೀ ಬೊಮ್ಮಾಯಿ ಅವರು ನಾಮಕರಣ ಹೊಂದಿದ ಸದಸ್ಯರು ವಿದ್ಯಾಕ್ಷೇತ್ರದಲ್ಲಿ ಬಹಳ ಸೇವೆಯನ್ನು ಸಲ್ಲಿಸಿದ್ದಾರೆಂದು ಹೇಳಿದ್ದನ್ನು ವಿದ್ಯಾ ಉಪಮಂತ್ರಿಗಳು ಹೌದಾದು ಅಂಥವರನ್ನೂ ಒಮ್ಮೊಮ್ಮೆ ನಾಮಿನೇಟ್ ಮಾಡುತ್ತೇವೆಂದು ಹೇಳಿದರು. ಆದರೆ ಇಲ್ಲಿ ಮುಖ್ಯವಾಗಿ ಬಂದಿರತಕ್ಕ ಪ್ರತಿ ಚುನಾವಣೆಗೆ ನಿಂತು ಫೇಲಾದವರನ್ನೇ ಮತ್ತೆ ನಾಮಕರಣ ಮಾಡಲಾಗಿದೆ ಎಂಬುದು.

SRI S.R. BOMMAI (Kundgol) :— Sir I rise to a point of Order. It has been requested that the Hon. Deputy Minister be ordered to place all the records on the Table of the House. In my humble opinion there is no rule which authorises the Speaker arbitrarily to order a Minister to place the document on the Table of the House. Simply because some Memders are recklessly arguing and Casting aspersions on the Governement ....

SRI AZIZ SAIT:—Sir, we are not reckless. The hon. Member is reckless: He cannot talk in that fashion. I will not allow him to speak like that.

SIR S.R. BOMMAI :—Sri, I request the protection of the House. The hon. Member cannot address me like that. I have equal rights. Let me explain my Point of Order.

ಶ್ರೀ ಎಂ.ಎನ್. ರಾಮಣ್ಣ:—ಅವರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅದನ್ನು ಸೌಜನ್ಯದಿಂದ ಕೇಳಿಬೇಕು.

SRI S.R. BOMMAI :— Rules 258 and 259 point out clearly as to when the Papers are to be laid on the Table of the House. The Minister has already answered the question and the question has been held-over. Therefore the point raised to order the Minister to place the papers on the Table of the House is not sustainable and is not according to any rule or provision.

ಉಪಾಧ್ಯಕ್ಷರು :—ಈಗ ನೀವು ಎನು ಹೇಳತ್ತಿದ್ದೀರೊ ಅದು ನನಗೆ ಅರ್ಥವಾಗಿದೆ. ಫೈಲ್ ಕೊಡಿ ಎಂದು ಹೇಳುವುದಕ್ಕೆ ರೂಲ್ಸ್‌ನಲ್ಲಿ ಪವರ್ ಇಲ್ಲ. ಇಂತಹ ಡಾಕ್ಯುಮೆಂಟ ಬೇಕುಎಂದುಬರೆದುಕೊಟ್ಟರೆ ಆವಾಗ ರೂಲ್ಸ್‌ನಲ್ಲಿ ಎನು ಪ್ರಾವಿಷನ್ ಇದೆಯೋ ಅದರಂತೆ ಮಾಡಬಹುದು. ಫೈಲ್ ಕೊಡಿ ಎಂದು ಹೇಳುವುದಕ್ಕೆ ನನಗೆ ಅಧಿಕಾರವಿಲ್ಲ

SRI K. H. PATIL :—Hon. Minister replied to supplementaries on the basis of information contained in a file. When he referred to that file, he is bound to produce that file. He must be ordered to produce that file. Rule No. 304 reads like this.

"If a Minister quotes in the Assembly a despatch or other State paper which has dnot deen resented to the Assembly, he shall lay the relevant paper on the Table.

Provided that this rule shall not apply to any documents which are stated by the Minister to be of such a nature that their production would be inconsistent with public interest.

Provided further that where a Minister gives in his own words a summary or gist of such despatch or State paper it shall not be necessary to lay the relevant papers on the Table."

I suppose the Chair will agree with me. The Governor has been referred to by the Minister. When the Hon. Minister has referred to the file, the House wants to know what it contains. He is bound to produce that document. Therefore, I request the Chair to compel the Minister to produce that document.

ಶ್ರೀ ಎಸ್ ಬಿ. ಅಗ್ನಿಹೋತ್ರಿ:—ಫೈಲ್ ಇಡಬೇಕೆಂದು ಕೇಳಿಕೊಂಡಿದ್ದು ಒಂದು ಮಾತು. ಫೈಲೇ ಇದ್ದಿದ್ದಲ್ಲ ಏಂದರೆ ಏನು ಇಡಬೇಕು? ಅದಕ್ಕೆ ಹಿರಿಯ ಮಂತ್ರಿಗಳು ಬಂದಾಗ ಅವರು ಇಡಬಹುದು.

ಉಪಾಧ್ಯಕ್ಷರು:—ಈ ಪ್ರಶ್ನೆ ಇನ್ನೊಂದು ಸಲ ಬರುತ ದೆ. ಆಗ ಮಾನ್ಯ ಸದಸ್ಯರಿಗೆ ಎನು ಅನು ಮಾನವಿದ್ದರೂ ಕೇಳಬಹುದು. ಅಧ್ಯಕ್ಷರಾದವರು ಫೈಲ್ ಕಾಲ್‌ಪಾರ್ ಮಾಡಲಿಕ್ಕೆ ರೂಲ್ಸ್‌ನಲ್ಲಿ ಅವ ಕಾತವಿಲ್ಲ.

SRI K. H. PATIL.—The rules are made to strengthen the hands of the Opposition. I have no opportunity to go to the secretarist to find out the file. The Member has got a right to look into the file on the floor of the House. If the file is not produced. I presume the democracy is burried on the floor of the House.

SRI AZIZ SAIT.—The recommendation was made on the basis of that file. What the Hon. Minister has said is recorded in the proceedings. When he was referred the file, it cannot be a secret document.

MR. DEPUTY SPEAKER.—The Speker has no power to call for the records. Now I adjourn the house for half an Hour.

The House adjourned for Tea at five minutes past Three and reassemble at Thrity-five Minutes past Three of the Clock.

[The Deputy Speaker in the Chair]

QUESTIONS FOR ANSWERS ON THE DAY

(but not taken up)

ESTIMATES FOR THE CONSTRUCTION OF BRIDGE NEAR BUDANUR

254. SRI H. D. DEVE GOWDA (Holenarasipur):—

Will the Minister for Public Works be pleased to state:—

(*a*) whether it is a fact that an estimate for the construction of a Bridge near Budanur on Holenarasipur–Keralapur road was prepared and the same is pending for want of administrative sanction;

(*b*) if so, the estimated cost of the work;

(*c*) whether the Government would take steps to sanction the same this year?

SRI K. LAKKAPPA (Minister for Public Works):—

(*a*) Yes. A line estimate was prepared.

(*b*) Rs. 2.00 lakhs.

(*c*) This will be considered on its mersts.